# ಕಲಿಕೆಗಾಗಿ ಹೊಸಹಾದಿ ತೆರೆಯೋಣ

# ಮುನ್ನಡೆಯುವ

## ಕನ್ನಡ

## KANNADA

ತರಗತಿ - 6

State Council of Educational and Research and Training (SCERT), Kerala.

## ಕಲಿಕೆಗಾಗಿ ಹೊಸಹಾದಿ ತೆರೆಯೋಣ

## ಮುನ್ನಡೆಯುವ

### ಮುನ್ನುಡಿ

ಮಾರಕವಾದ ಕೋವಿಡ್ ಮಹಾಮಾರಿಯ ಅಲೆಯಿಂದ 2019 ರಿಂದ 2021 ರ ವರೆಗೆ ವಿದ್ಯಾರ್ಥಿಗಳಿಗೆ ಪೂರ್ಣ ರೂಪದಲ್ಲಿ ನೇರವಾದ ಕಲಿಕಾನುಭವಗಳು ಲಭಿಸದಿರುವುದರಿಂದ ಅವರ ಕಲಿಕಾ ಗುಣಮಟ್ಟದಲ್ಲಿ ಹಿಂಜರಿಕೆ ಉಂಟಾಗಿರುವುದಾಗಿ 2022 ರ ಕಾಲುವಾರ್ಷಿಕ ಮೌಲ್ಯಮಾಪನದಿಂದ ಲಭಿಸಿದ ಫಲಿತಾಂಶಗಳ ವಿಶ್ಲೇಷಣೆ ಮತ್ತು ಅಧ್ಯಾಪಕರ ಅನುಭವಗಳಿಂದ ವೇದ್ಯವಾಗಿರುತ್ತದೆ. ಮೊದಲಿನ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಲಭಿಸಬೇಕಾಗಿದ್ದ ಕೆಲವು ಆಶಯಗಳನ್ನು ಆರ್ಜಿಸುವುದಕ್ಕೂ ಪ್ರಸ್ತುತ ತರಗತಿಯ ಕಲಿಕೆಯನ್ನು ಮತ್ತಷ್ಟು ಉತ್ತಮಗೊಳಿಸುವುದಕ್ಕೂ ಸಹಕಾರಿಯಾಗುವ ಒಂದು ಕಲಿಕಾ ಸಹಾಯಿಯನ್ನು ತಯಾರಿಸಿ ಕೊಡಲಾಗಿದೆ. ಇದರಲ್ಲಿ ವಿದ್ಯಾರ್ಥಿಗೆ ನಷ್ಟವಾದ ಕಲಿಕಾನುಭವಗಳ ಕುರಿತಾದ ವಿವರಗಳನ್ನು ಮತ್ತು ಅದನ್ನು ಪರಿಹರಿಸುವ ಮಾರ್ಗೋಪಾಯಗಳನ್ನು ಸೂಚಿಸಲಾಗಿದೆ. ವಿದ್ಯಾರ್ಥಿಗಳು ಈ ಕಲಿಕಾ ಸಹಾಯಿಯ ನೆರವಿನಿಂದ ಸ್ವಯಂ ಕಲಿಕೆ ಮತ್ತು ಅಧ್ಯಾಪಕರ ಸಹಾಯದಿಂದ ನಷ್ಟವಾದ ಕಲಿಕಾನುಭವಗಳನ್ನು ಪುನಃ ಆರ್ಜಿಸಿಕೊಂಡು ಆತ್ಮವಿಶ್ವಾಸದಿಂದ ಕಲಿಕೆಯಲ್ಲಿ ಮುನ್ನಡೆಯುವಂತಾಗಲಿ ಎನ್ನುವ ಶುಭ ಹಾರೈಕೆ.


**ನಿರ್ದೇಶಕರು,**

**SCERT, ಕೇರಳ**

## ವಿಷಯ : ಕನ್ನಡ ಮೂಲಪತ್ಯ Kannada AT
## ಯುನಿಟ್ : ತಾಣ-ಯಾನ & ಜೀವನ ಕಲೆ

**ಚಟುವಟಿಕೆ - 1**

**ಆಮೆ**



ಆಮೆಯೊಂದು ಕೆರೆಯ ದಡದಿ
ಮನೆಯ ಮಾಡಿತು
ಹಕ್ಕಿಯಂತೆ ಹಾರಬೇಕು
ಎಂದು ಬಯಸಿತು

ಹಕ್ಕಿಜೊತೆಗೆ ಸಂಗ ಮಾಡಿ
ಆಸೆ ತಿಳಿಸಿತು
ಹಕ್ಕಿ ಹೇಳಿದಂತೆ ಆಮೆ
ಕೇಳಲೊಪ್ಪಿತು

ಅತ್ತ ಇತ್ತ ಹಕ್ಕಿ ಎರಡು
ಬಡಿಗೆ ಹಿಡಿದುವು
ಆಮೆ ಅದಕೆ ಜೋತು ಬೀಳೆ
ಹಾರಿ ಹೋದುವು

ದಾರಿಯಲ್ಲಿ ಇದನು ಕಂಡು
ಜನರು ನಕ್ಕರು
ಮಾನ ಹೋಯಿತೆಂದು ಆಮೆ
ಮನದಿ ಕುದಿಯಿತು



ನಕ್ಕ ಜನರ ಬೈಯ್ಯಲೆಂದು
ಬಾಯಿ ತೆರೆಯಿತು
ಮೇಲಿನಿಂದ ಕೆಳಗೆ ಬಿದ್ದು
ಸತ್ತು ಹೋಯಿತು.

ಕಥನ ಕವನವನ್ನು ಓದಿದಿರಲ್ಲವೇ? ಇದರ ಕಥೆ ಇಷ್ಟವಾಯಿತೇ?

- ➔ ಇದರಲ್ಲಿ ಬರುವ ಕಥಾ ಪಾತ್ರಗಳು ಯಾವುದೆಲ್ಲಾ?
- ➔ ಕವನದ ಕಥೆಯನ್ನು ಬಾಯ್ದೆರೆಯಾಗಿ ಹೇಳಬಹುದೇ? (ಮಕ್ಕಳಿಂದ ಕಥೆಯನ್ನು ಬಾಯ್ದೆರೆಯಾಗಿ ಹೇಳಿಸುವುದು.)
- ➔ ಕಥೆಯನ್ನು ಗುಂಪಿನಲ್ಲಿ ಸಂಭಾಷಣೆ ಸಹಿತ ಅಭಿನಯಿಸಲು ಸೂಚಿಸುವುದು. ಮಂಡನೆ.

**ಅಧ್ಯಾಪಕರಿಗೆ ಸೂಚನೆಗಳು**

**- ಸಂದರ್ಭವನ್ನು ಆರಿಸುವಾಗ ಅಧ್ಯಾಪಕರ ಸಲಹೆ ಅಗತ್ಯವಿದೆ.**
**- ಸಂಭಾಷಣೆಯಲ್ಲಿ ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಇರಬೇಕು.**
**- ಸಂಭಾಷಣೆಯ ಬೆಳವಣಿಗೆಯಲ್ಲಿ ಪರಸ್ಪರ ಸಂಬಂಧವಿರಬೇಕು.**
**- ಎಲ್ಲಾ ವಿದ್ಯಾರ್ಥಿಗಳನ್ನು ಒಳಗೊಳ್ಳಿಸಬೇಕು.**


- ➔ ಸಂಭಾಷಣೆಗಳನ್ನು ವೈಯಕ್ತಿಕವಾಗಿ ಬರೆಯುವುದು.
- ➔ ಗುಂಪಿನಲ್ಲಿ ಹಂಚಿ ಉತ್ತಮವಾದ ಸಂಭಾಷಣೆ ರಚಿಸುವುದು.
- ➔ ಗುಂಪುಗಳು ಪರಸ್ಪರ ಮೌಲ್ಯಮಾಪನ ನಡೆಸುವುದು.
- ➔ ಉತ್ಪನ್ನವನ್ನು ಅಧ್ಯಾಪಕರು ಎಡಿಟಿಂಗ್ ಗೆ ಒಳಪಡಿಸುವರು. (ಸಾಧ್ಯವಾದಲ್ಲಿ ವಿದ್ಯಾರ್ಥಿಗಳ ವೈಯಕ್ತಿಕ ರಚನೆಗಳನ್ನೂ ಎಡಿಟಿಂಗ್ ಮಾಡುವುದು.)

ಇದರ ಮುಂದುವರಿಕೆಯಾಗಿ ಕನ್ನಡ ಮುಂದುವರಿದ ಪಠ್ಯದ **ತೋಳ ಮತ್ತು ಕೊಕ್ಕರೆ** ಕಥನ ಕವನವನ್ನು **ಸಂಭಾಷಣೆ** ರೂಪದಲ್ಲಿ ಬರೆದು ಅಭಿನಯಿಸಿ ಮಂಡಿಸುವುದು.

**ಚಟುವಟಿಕೆ - 2**



ನೀಡಿರುವ ಚಿತ್ರವನ್ನು ನಿರೀಕ್ಷಿಸಿರಿ. ಚಿತ್ರದಲ್ಲಿರುವ ವಿಚಾರಗಳನ್ನು ಒಳಗೊಳ್ಳಿಸಿ ಪದಸೂರ್ಯವನ್ನು ಪೂರ್ತಿಗೊಳಿಸಿರಿ.



ಪದಸೂರ್ಯದಲ್ಲಿ ನೀಡಿದ ಪದಗಳನ್ನು ಮಾದರಿಯಂತೆ ಬರೆದು ಬರೆಯಿರಿ.

ಹೊಳೆ - ಶಾಂತ ಚಿತ್ತವಾಗಿ ಹರಿಯುತ್ತಿರುವ ಹೊಳೆ.
ಪಕ್ಷಿಗಳು - ..........................................................
ಗುಡ್ಡ - ..........................................................
........ - ..........................................................
........ - ..........................................................
........ - ..........................................................
........ - ..........................................................
........ - ..........................................................

ಮೇಲಿನ ವಾಕ್ಯಗಳ ಸಹಾಯದಿಂದ ಚಿತ್ರದಲ್ಲಿ ನೀಡಿದ ಪ್ರಕೃತಿಯನ್ನು ವರ್ಣಿಸಿ ಬರೆಯಿರಿ.
ಅಧ್ಯಾಪಕರು ಅಗತ್ಯದ ಸಹಾಯ ನೀಡುವುದು. ಅಧ್ಯಾಪಕರ ಹಸ್ತಕ್ಷೇಪದಲ್ಲಿ ಮಕ್ಕಳ ರಚನೆಗಳನ್ನು ತಿದ್ದುವುದು ಮತ್ತು ಅಗತ್ಯದ ಸಲಹೆ ಸೂಚನೆಗಳನ್ನು ನೀಡುವುದು.

**ಮಾದರಿ**

ನಮ್ಮ ಮನೆಯ ಸಮೀಪ ಶಾಂತಚಿತ್ತವಾಗಿ ಹರಿಯುವ ಒಂದು ಹೊಳೆಯಿದೆ. ಇದು ಅನೇಕ ಜಲಚರಗಳಿಗೆ ಜೀವ ಜಲವಾಗಿದೆ. ಹೊಳೆಯ ಸೌಂದರ್ಯವನ್ನು ಇನ್ನಷ್ಟು ಹೆಚ್ಚಿಸುವ ತಾವರೆ, ನೈದಿಲೆಯಂತಹ ಸುಂದರ ಪುಷ್ಪಗಳೂ ಇಲ್ಲಿವೆ. ಬೆಳಗಿನ ಹೊತ್ತು ಬೆಟ್ಟವ ಏರಿ ಬರುವ ಸೂರ್ಯನು ಬೆಟ್ಟಕ್ಕೆ ಕಿರೀಟವಿರಿಸಿದಂತೆ ತೋರುತ್ತಾನೆ. ಬೆಟ್ಟದ ತಪ್ಪಲಲ್ಲಿ ದಟ್ಟವಾದ ಕಾಡು ಇದ್ದು, ಅಲ್ಲಿನ ಗಿಡ ಮರಗಳು ನಮ್ಮ ಮನೆ ಪರಿಸರವನ್ನು ಹಚ್ಚಹಸುರಾಗಿಸಿದೆ. ಸಂಜೆಯ ಹೊತ್ತು ಆಹಾರ ಹುಡುಕಿ ತಮ್ಮ ಗೂಡು ಸೇರುವ ಹಕ್ಕಿಗಳ ಹಿಂಡನ್ನು ಕಂಡಾಗ ಮನಸ್ಸು ಪುಳಕಿತವಾಗುವುದು.

**ಅಧ್ಯಾಪಕರಿಗಿರುವ ಸೂಚನೆಗಳು**

- ಚಿತ್ರ ನೋಡಿ ಪದಸೂರ್ಯವನ್ನು ವಿದ್ಯಾರ್ಥಿಗಳು ವೈಯಕ್ತಿಕವಾಗಿ ಭರ್ತಿ ಮಾಡುವುದು.
- ವಾಕ್ಯ ರಚನೆಯ ಸಂದರ್ಭದಲ್ಲಿ ಅಲಂಕಾರಿಕ ಪದಗಳು, ಹೋಲಿಕೆಗಳು, ನುಡಿಕಟ್ಟು, ಗಾದೆ ಮಾತುಗಳ ಮೂಲಕ ಓದುಗರನ್ನು ಸೆಳೆಯುವಂತಹ ವಾಕ್ಯರಚನೆ ಮಾಡಲು ಪ್ರೋತ್ಸಾಹಿಸುವುದು.
- ಭಾಷಾ ಶೈಲಿ, ಭಾಷಾ ಪ್ರಯೋಗಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡುವುದು.

ಕನ್ನಡ ಮೂಲ ಪಠ್ಯದ ಶಬರಿಯ ಕಥೆಯಲ್ಲಿ ಬರುವ ವರ್ಣನೆಯನ್ನು ಬರೆಯುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಈ ರೀತಿಯಲ್ಲಿ ಸರಳವಾಗಿ ವರ್ಣನೆಯನ್ನು ಬರೆಯುವ ಚಟುವಟಿಕೆಗಳನ್ನು ನೀಡಬೇಕು.


**ಚಟುವಟಿಕೆ - 3**

ನೀವು ರಾಣಾ ಮತ್ತು ಅಕ್ಬರ್ ನ ನಾಟಕ ಭಾಗವನ್ನು ಓದಿರುವಿರಲ್ಲವೇ? ಅದರಲ್ಲಿ ಯಾವೆಲ್ಲಾ ಕಥಾಪಾತ್ರಗಳಿವೆ? ಅವುಗಳಲ್ಲಿ ನಿಮಗಿಷ್ಟವಾದ ಪಾತ್ರ ಯಾವುದು? ಕಥಾಪಾತ್ರದ ಪಾತ್ರ ಚಿತ್ರಣವನ್ನು ಹೇಗೆ ಬರೆಯಬಹುದು?

**ರಾಣಿ**

- ನಾಟಕದಲ್ಲಿ ರಾಣಿಯು ಯಾವ ಸಂದಿಗ್ಧ ಪರಿಸ್ಥಿತಿಯಲ್ಲಿ ಇರುವಳು?
- ತನ್ನ ಗಂಡನನ್ನು ಕಂಡಾಗ ಅವಳ ಮನಸಲ್ಲಿ ಮೂಡಿದ ಆಲೋಚನೆಯೇನು?
- ಸಾಮಾನ್ಯ ರಾಣಿಯಲ್ಲಿರುವ ಗುಣಕ್ಕಿಂತ ಯಾವ ವ್ಯತ್ಯಾಸವನ್ನು ರಾಣಾನ ಪತ್ನಿಯಲ್ಲಿ ಕಂಡಿರಿ?
- ರಾಣಿಯ ವಿಶೇಷ ಗುಣಗಳಾವುವು?
- 
- 
- 

**ಮಾದರಿ**



ನಾಟಕದಲ್ಲಿ ರಾಣಾ, ರಾಣಿ, ರಾಣಾನ ದೂತ (ಸತ್ಯಪಾಲ), ಸೇನಾಧಿಪತಿ, ಸುಭಾನ ಖಾನ, ಅಕ್ಬರ್ ಇತ್ಯಾದಿ ಪಾತ್ರಗಳಿದ್ದರೂ ನನಗೆ ರಾಣಿಯ ಪಾತ್ರ ಬಹಳ ಇಷ್ಟವಾಯಿತು. ಖಾಯಿಲೆಯಿಂದ ಬಳಲುತ್ತಿರುವ ಮಗನನ್ನು ರಾಜನ ಉಪಸ್ಥಿತಿ ಇಲ್ಲದಿದ್ದರೂ ಬಹಳ ಕಾಳಜಿಯಿಂದ ನೋಡಿಕೊಳ್ಳುತ್ತಿರುವುದು ಅವಳ ಮಾತೃವಾತ್ಸಲ್ಯವನ್ನು ತೋರಿಸುತ್ತದೆ. ಮಗನನ್ನು ನೋಡಲು ಬಂದ ತನ್ನ ಪತಿ ಮರಳಲು ಸಿದ್ಧನಾದಾಗ ಅವನ ಆಸರೆಯನ್ನು ಬಯಸಿದಳು. ಇಲ್ಲಿ ನಮಗೆ ಅವಳು ಎಷ್ಟು ನೊಂದಿರುವಳು ಎಂಬುದನ್ನು ಅರಿಯಬಹುದು. ಶತ್ರುಗಳಿಂದ ತನ್ನ ಗಂಡನನ್ನು ಯಾವುದೇ ಮಾರ್ಗದಲ್ಲಿ ಉಳಿಸಬೇಕೆನ್ನುವ ದೃಷ್ಟಿಯಿಂದ ಅರಮನೆಯ ರಹಸ್ಯ ದಾರಿಯನ್ನು ಸೂಚಿಸಿದಳು. ಇಲ್ಲಿ ತನ್ನ ಗಂಡನಿಲ್ಲದಿದ್ದರೂ ಅರಮನೆಯಲ್ಲಿರುವ ಅವಳ ಧೈರ್ಯವನ್ನು ನಮಗೆ ಕಾಣಬಹುದು. ಒಬ್ಬ ತಾಯಿಯು ಮಗನೆಡೆಗೆ ತೋರಿಸುವ ವಾತ್ಸಲ್ಯ, ಗಂಡನ ಕುರಿತಾದ ಕಾಳಜಿ, ಸಮಸ್ಯೆಯನ್ನು ಎದುರಿಸುವ ಧೈರ್ಯವನ್ನು ಈ ಪಾತ್ರದಿಂದ ನಾವು ತಿಳಿದುಕೊಳ್ಳಬಹುದು.

**ಅಧ್ಯಾಪಕರಿಗಿರುವ ಸೂಚನೆಗಳು**

1. ಪಾತ್ರದ ಬಗ್ಗೆ ಸಮಗ್ರವಾಗಿ ಅರಿಯಲು ಸಹಾಯಕವಾದ ಪ್ರಶ್ನೆಗಳನ್ನು ಮಕ್ಕಳಲ್ಲಿ ಕೇಳಬೇಕು.
2. ಪಾತ್ರ ಮಕ್ಕಳ ಜೀವನದಲ್ಲಿ ಬೀರಿದ ಪ್ರಭಾವವನ್ನು ತಿಳಿದುಕೊಳ್ಳುವುದು.
3. ಪಾತ್ರದ ಕುರಿತಾಗಿ ಬಾಯ್ದೆರೆಯಾಗಿ ಹೇಳಲು ಅವಕಾಶ ನೀಡಬೇಕು.
4. ಆಶಯ ಸ್ಪಷ್ಟವಾದ ಬರವಣಿಗೆಯನ್ನು ಅಧ್ಯಾಪಕರು ಖಾತರಿಪಡಿಸಬೇಕು.

**ಚಟುವಟಿಕೆ - 4**

**ತಲೆ - ತಾರೆ - ತಿರುಗು - ತೀರ್ಥ - ತುರಗ - ತೂತು - ತೃಣ - ತೆವಳು - ತೇರು - ತೈಲ - ತೊರೆ - ತೋಟ - ತೌಡು - ತಂದೆ - ತಃ**

ಮೇಲಿನ ಪದಗಳನ್ನು ಓದಿದಿರಲ್ಲವೇ? ಇದರಲ್ಲಿ ಏನು ವಿಶೇಷತೆ ಇದೆ? ಇದೇ ರೀತಿಯಲ್ಲಿ ಇತರ ಅಕ್ಷರಗಳ ಕಾಗುಣಿತಾಕ್ಷರಗಳಿಂದ ಪ್ರಾರಂಭವಾಗುವ ಪದಗಳನ್ನು ಬರೆಯಿರಿ.

ಗಮನ : ...........................................................................................................

ನಯನ : ...........................................................................................................

ಮರ : ...........................................................................................................

ಸಮಯ : ...........................................................................................................

**ಚಟುವಟಿಕೆ -5**

**ಕ ಅಕ್ಷರದಿಂದ ಕೊನೆಯಾಗುವ ಪದಗಳು**

ಕೆಳಗೆ ನೀಡಿದ ಸೂಚನೆಗಳಿಗೆ ಸೂಕ್ತವಾದ ಪದಗಳನ್ನು ಆರಿಸಿ ಬರೆಯಿರಿ.

1. ಸ್ವರ್ಗ ಪದದ ವಿರೋದಾರ್ಥ ಪದ ________________
2. ನೆನಪಿಗೆ ಬೇಕಾಗಿ ಕಟ್ಟಿದ ಕಟ್ಟಡ ________________
3. ಚಿನ್ನ ಪದದ ಪರ್ಯಾಯ ಪದ ________________
4. ನಮಗೆ ಉಸಿರಾಡಲು ಬೇಕಾಗಿರುವುದು ________________
5. ನೂಲು ತೆಗೆಯುವ ಸಾಧನ ________________
6. ವ್ಯಾಪಾರಿಯನ್ನು ಹೀಗೂ ಹೇಳಬಹುದು ________________
7. ಆಳು ಪದದ ಸಮಾನಾರ್ಥ ಪದ ________________
8. ದೇವರ ನಂಬದವನು ________________
9. ಹಾಸ್ಯಗಾರ ________________
10. ನಿಜವಲ್ಲ ಊಹಿಸಿದ್ದು ________________

| |
|---|
| ವಿದೂಷಕ |
| ಚರಕ |
| ಕಾಲ್ಪನಿಕ |
| ಸ್ಮಾರಕ |
| ನರಕ |
| ಆಮ್ಲಜನಕ |
| ಕನಕ |
| ವರ್ತಕ |
| ಸೇವಕ |
| ನಾಸ್ತಿಕ |

## ವಿಷಯ : ಕನ್ನಡ ಮೂಲಪತ್ಯ Kannada BT

### ಯುನಿಟ್ : ಒಂದಾಗಿ ಬಾಳೋಣ

**ಚಟುವಟಿಕೆ -1**

ಕೆಳಗೆ ಕೊಟ್ಟಿರುವ ಮಾಹಿತಿಗಳನ್ನು ಮತ್ತು ಅಡಿಗೆರೆ ಎಳೆದ ವಾಕ್ಯವನ್ನು ಓದಿ ಸಂಬಂಧ ಕಂಡುಕೊಳ್ಳಿರಿ.

- ಪದವಿ : ಭಾರತದ 15 ನೇ ರಾಷ್ಟ್ರಪತಿ
- ಹೆಸರು : ದ್ರೌಪದಿ ಮುರ್ಮು

  **ಭಾರತದ 15 ನೇ ರಾಷ್ಟ್ರಪತಿಯಾದ ದ್ರೌಪದಿ ಮುರ್ಮುರವರು**

- ಸ್ಥಳ : ಒಡಿಶಾ ರಾಜ್ಯದ ರೈರಂಗಪುರದ ಬೈದಪೋಸಿ
- ಜನನ : 20.06.1958

  **20.06.1958 ರಂದು ಒಡಿಶಾ ರಾಜ್ಯದ ರೈರಂಗಪುರದ ಬೈದಪೋಸಿಯಲ್ಲಿ ಜನಿಸಿದರು.**

- ತಂದೆ : ಬಿರಾಂಚಿ ನಾರಾಯಣ್ ತುಡು , ಗ್ರಾಮ ಪರಿಷತ್ತಿನ ಸಾಂಪ್ರದಾಯಿಕ ಮುಖ್ಯಸ್ಥರು

  **ಇವರ ತಂದೆ ಬಿರಾಂಚಿ ನಾರಾಯಣ್ ತುಡು, ಇವರು ಗ್ರಾಮ ಪರಿಷತ್ತಿನ ಸಾಂಪ್ರದಾಯಿಕ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ್ದರು.**

- ವಿದ್ಯಾಭ್ಯಾಸ : ರಮಾದೇವಿ ಮಹಿಳಾ ಕಾಲೇಜಿನಲ್ಲಿ ಕಲಾ ಪದವಿ

  **ಇವರು ರಮಾದೇವಿ ಮಹಿಳಾ ಕಾಲೇಜಿನನಿಂದ ಕಲಾ ಪದವಿಯನ್ನು ಪಡೆದಿರುವರು.**

- ಸಾಧನೆ : ಶಿಕ್ಷಕಿ, ಭಾರತದ ಎರಡನೇ ಮಹಿಳಾ ರಾಷ್ಟ್ರಪತಿ, ಸ್ವಾತಂತ್ರ್ಯಾನಂತರದ ಕಿರಿಯ ರಾಷ್ಟ್ರಪತಿ

  **ಸ್ವಾತಂತ್ರ್ಯಾನಂತರದ ಕಿರಿಯ ರಾಷ್ಟ್ರಪತಿ ಎಂಬ ಹೆಗ್ಗಳಿಕೆ ಇವರಿಗಿದ್ದು, ಶಿಕ್ಷಕಿಯಾಗಿಯೂ ಕೆಲಸ ಮಾಡಿರುತ್ತಾರೆ. ಅಲ್ಲದೆ ಇವರು ಭಾರತದ ಎರಡನೇ ಮಹಿಳಾ ರಾಷ್ಟ್ರಪತಿಯಾಗಿ ಆಯ್ಕೆಯಾಗಿರುವರು.**

ಇದೇ ಮಾದರಿಯಲ್ಲಿ ಈ ಕೆಳಗಿನ ಸ್ವಾತಂತ್ರ್ಯ ಹೋರಾಟಗಾರರ ಮಾಹಿತಿಗಳನ್ನು ಸರಳ ವಾಕ್ಯ ರೂಪದಲ್ಲಿ ಬರೆಯಿರಿ.

- ಹೆಸರು : ಸುಭಾಷ್ ಚಂದ್ರ ಬೋಸ್
- ಜನನ : 23.1.1897

  **ಭಾರತೀಯ ಸ್ವಾತಂತ್ರ್ಯ ಹೋರಾಟಗಾರರಾದ** ____________________

  ____________________

- ಸ್ಥಳ : ಒರಿಸ್ಸಾದ ಕಟಕ್
- ತಂದೆ : ಜಾನಕೀನಾಥ್ ಬೋಸ್
- ತಾಯಿ : ಪ್ರಭಾವತಿ

**ಇವರು ಒರಿಸ್ಸಾದ ಕಟಕ್‌ನಲ್ಲಿ** ____________________

____________________

- ವಿದ್ಯಾಭ್ಯಾಸ : ತತ್ವಶಾಸ್ತ್ರ ವಿಭಾಗದಲ್ಲಿ ಬಿ.ಎ
- ಸಾಧನೆ : ಐ.ಸಿ.ಎಸ್ ಪರೀಕ್ಷೆಯಲ್ಲಿ ನಾಲ್ಕನೇ ಸ್ಥಾನ, ಭಾರತೀಯ ರಾಷ್ಟ್ರೀಯ ಸೇನೆ ಕಟ್ಟಿದ್ದು, ಆಜಾದ್ ಹಿಂದ್ ಫೌಜ್‌ನ ನೇತಾರ, ಇಂಡಿಯನ್ ನೇಶನಲ್ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಎರಡು ಬಾರಿ ನೇಮಕ

**ತತ್ವಶಾಸ್ತ್ರ ವಿಭಾಗದಲ್ಲಿ ಬಿ.ಎ ಪದವಿ ಪಡೆದ ಇವರು** ____________________

____________________

____________________

- ಪ್ರೇರಣೆ : ಸ್ವಾಮಿ ವಿವೇಕಾನಂದ

**ಇವರು ಸ್ವಾಮಿ ವಿವೇಕಾನಂದರ ತತ್ವಗಳಿಂದ** ____________________

- ಹೋರಾಟದ ವಿಧ : ಕ್ರಾಂತಿ ಪಥ
- ಮರಣ : 18.8.1945

**ಕ್ರಾಂತಿ ಪಥದಲ್ಲಿ ಸ್ವಾತಂತ್ರ್ಯ ಹೋರಾಟ ನಡೆಸಿದ ಇವರು** ____________________

____________________

*ಅಡಿಗೆರೆ ಎಳೆದ ವಾಕ್ಯಗಳನ್ನು ಒಟ್ಟು ಸೇರಿಸಿ ನಿಮ್ಮ ನೋಟು ಪುಸ್ತಕದಲ್ಲಿ ಸುಭಾಷ್ ಚಂದ್ರ ಬೋಸರ ವ್ಯಕ್ತಿಪರಿಚಯವನ್ನು ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.*

**ಅಧ್ಯಾಪಕರಿಗೆ ಸೂಚನೆಗಳು**

- ✔ ವ್ಯಕ್ತಿ ಪರಿಚಯವು ವ್ಯಕ್ತಿಯ ಕುರಿತಾಗಿ ಕೊಟ್ಟಿರುವ ಎಲ್ಲಾ ಮಾಹಿತಿಗಳನ್ನು ಒಳಗೊಂಡಿರಬೇಕು.
- ✔ ಆ ವ್ಯಕ್ತಿಯ ಜೀವನ ಘಟನೆಗಳನ್ನು ಕ್ರಮಾನುಗತವಾಗಿ ಬರೆದಿರಬೇಕು.
- ✔ ವಿವಿಧ ಭಾಷಾ ಪ್ರಯೋಗಗಳನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಳ್ಳಬೇಕು.
- ✔ ವ್ಯಕ್ತಿ ಪರಿಚಯವು ವಸ್ತುನಿಷ್ಠವಾಗಿರಬೇಕು. ಎಡಿಟಿಂಗ್ ಸಾಧ್ಯತೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು.

**ಚಟುವಟಿಕೆ -2**

ಭಾರತದ ಸ್ವಾತಂತ್ರ್ಯೋತ್ಸವವನ್ನು ಭಾರತೀಯ ಸ್ವಾತಂತ್ರ್ಯದ ಅಮೃತ ಮಹೋತ್ಸವ ಎಂಬ ಹೆಸರಿನಿಂದ ಆಚರಿಸಿದುದರ ಬಗ್ಗೆ ತಿಳಿದಿರುವಿರಲ್ಲವೇ? ಈ ಸಂದರ್ಭದಲ್ಲಿ ಭಾರತಾದ್ಯಂತ ಮೂರು ದಿನಗಳ ಕಾಲ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಲು ಅವಕಾಶವಿತ್ತು. ನಿಮ್ಮ ಶಾಲೆಯಲ್ಲೂ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಬಹಳ ವಿಜೃಂಭಣೆಯಿಂದ ಆಚರಿಸಿರಬಹುದು. ಅದರಲ್ಲಿ ನೀವೂ ಭಾಗಿಯಾಗಿರುವಿರಿ. ಅಂದು ಶಾಲೆಯಲ್ಲಿ ಯಾವೆಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು? ಒಮ್ಮೆ ನೆನಪಿಸಿ ನೋಡಿ... ನಿಮ್ಮ ಶಾಲೆಯಲ್ಲಿ ಜರಗಿದ ಸ್ವಾತಂತ್ರ್ಯದಿನದ ಬಗ್ಗೆ ಸೂಕ್ತವಾದ ಶೀರ್ಷಿಕೆಯೊಂದಿಗೆ ಪತ್ರಿಕಾ ವರದಿಯೊಂದನ್ನು ಬರೆಯುವಿರಾ?

ಮಾದರಿ

.................................................................................................... (ಶೀರ್ಷಿಕೆ)

...............................( ಸ್ಥಳ) : ....................................................................................................

......................................................................................................................................

...................................................................... (ಮುನ್ನುಡಿ- ಕಿರು ಮಾಹಿತಿ)

......................................................................................................................................

......................................................................................................................................

......................................................................................................................................

......................................................................................................................................

......................................................................................................................................

......................................................................................................................................

(ವಸ್ತು ನಿಷ್ಠ ಮಾಹಿತಿ ಮತ್ತು ಮುಕ್ತಾಯ)

<u>ಅಧ್ಯಾಪಕರಿಗೆ ಸೂಚನೆಗಳು</u>

ಆಕರ್ಷಕ ಶೀರ್ಷಿಕೆ ಒಳಗೊಂಡಿರಬೇಕು.

ಎಲ್ಲಾ ವಿಚಾರಗಳನ್ನು ಸಂಕ್ಷಿಪ್ತವಾಗಿ ಒಳಗೊಂಡಿಸಿರಬೇಕು.

ವಾರ್ತೆಯು ವಸ್ತುನಿಷ್ಠವೂ ಸ್ಪಷ್ಟವೂ ಆಗಿರಬೇಕು.

ಅಕ್ಷರ, ಪದ, ವಾಕ್ಯ ಇತ್ಯಾದಿ ಭಾಷಾ ಘಟಕಗಳನ್ನು ತನ್ನದೇ ಆದ ಶೈಲಿಯಲ್ಲಿ ಬಳಸಿರಬೇಕು.

**ಚಟುವಟಿಕೆ -3**

ಕೆಳಗಿನ ಕರಪತ್ರವನ್ನು ಓದಿರಿ.

# ಮತ ಸೌಹಾರ್ದ

ಕಾಡಬೆಟ್ಟು

02.10.2022

ಮಾನ್ಯರೇ,

ಭಾರತದ ಪವಿತ್ರ ನೆಲದಲ್ಲಿ ವಿವಿಧ ಭಾಷೆ, ಸಂಸ್ಕೃತಿ, ಸಂಪ್ರದಾಯಗಳು ಅರಳಿವೆ. ಎಲ್ಲ ವರ್ಗಗಳ ಜನರೂ ಇಲ್ಲಿ ನೆಮ್ಮದಿಯಿಂದ ಬಾಳಿದ್ದಾರೆ. ಭಾರತೀಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ. ಸಹನೆ ಮತ್ತು ಸೌಹಾರ್ದ ನಮ್ಮ ಬಾಳಿನ ಉಸಿರು. ವಿಶ್ವವೇ ತಲೆದೂಗುವಂತ ಹಿರಿಮೆ ನಮ್ಮದು.

ಇಂತಹ ಶಾಂತಿಪ್ರಿಯ ನಾಡಿನಲ್ಲಿ ಕೋಮುದ್ವೇಷ, ದಳ್ಳುರಿ ನಡೆಯುತ್ತಿರುವುದು ದುರದೃಷ್ಟಕರ. ವಿವಿಧ ಜಾತಿ ಮತಗಳಿಗೆ ಸೇರಿದ ನಾವು ಎಲ್ಲರೂ ಒಂದೇ ಎಂಬ ಮನೋಭಾವವನ್ನು ಬೆಳೆಸಬೇಕಾಗಿದೆ. ಜಾತಿ ಮತಗಳ ಭಾವನೆ ತೊಡೆದು ಎಲ್ಲರೂ ಶಾಂತಿ ಸಮಾಧಾನದಿಂದ ಬಾಳುವಂತಾಗಬೇಕು. ನಮ್ಮ ಸಂವಿಧಾನದಲ್ಲಿರುವ ಮಹೋನ್ನತ ಆದರ್ಶಗಳನ್ನು ಎತ್ತಿಹಿಡಿಯೋಣ. ಈ ಮೂಲಕ ಭವ್ಯ ಭಾರತವನ್ನು ಕಟ್ಟೋಣ.

ಇತೀ,

ಆರನೇ ತರಗತಿ ವಿದ್ಯಾರ್ಥಿಗಳು

ಸರಕಾರಿ ಪ್ರೌಢಶಾಲೆ ಕಾಡಬೆಟ್ಟು

ಮೇಲಿನ ಮಾದರಿ ಕರಪತ್ರವನ್ನು ಓದಿದಿರಲ್ಲವೇ? ಇದೇ ಮಾದರಿಯಲ್ಲಿ ಮಾದಕ ವಸ್ತುಗಳ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುವ ಕರಪತ್ರವೊಂದನ್ನು ತಯಾರಿಸಿರಿ.

**ಅಧ್ಯಾಪಕರಿಗೆ ಸೂಚನೆಗಳು**

- ಅಧ್ಯಾಪಕರು ಕರಪತ್ರದ ಮಾದರಿಗಳನ್ನು ಪ್ರದರ್ಶಿಸಿ ಅದರ ಚೌಕಟ್ಟನ್ನು ಮಕ್ಕಳಿಗೆ ಮನವರಿಕೆ ಮಾಡಬೇಕು.
- ಆಕರ್ಷಕ ವಾಕ್ಯಗಳನ್ನು ಬರೆಯಲು ಪ್ರೋತ್ಸಾಹಿಸಬೇಕು.
- ವಿಷಯಗಳನ್ನು ಚುಟುಕಾಗಿ ಮತ್ತು ವಸ್ತುನಿಷ್ಠವಾಗಿ ಒಳಗೊಳ್ಳಿಸುವಂತೆ ಸೂಚಿಸಬೇಕು.
- ಭಾಷಾ ಘಟಕಗಳನ್ನು ಯೋಗ್ಯರೀತಿಯಲ್ಲಿ ಬಳಸಲು ಸೂಚಿಸಬೇಕು.

**ಚಟುವಟಿಕೆ - 4**

ಕೆಚ್ಚಿನ ಕಿಡಿ ಪಾಠಭಾಗವನ್ನು ಓದಿ ಸರಿಯಾದ ಅರ್ಥ ಬರುವಂತೆ ಈ ಕೆಳಗಿನ ಪದಗಳನ್ನು ಜೋಡಿಸಿ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ.

1. ಗಂಗಾಧರರಾಯನಿಗೆ / ಪತ್ನಿಯಾಗಿದ್ದಳು. / ಎಲ್ಲಾ / ತಕ್ಕ / ಲಕ್ಷ್ಮಿಬಾಯಿಯು / ರೀತಿಯಲ್ಲಿ

   ..........................................................................................................................

2. ಅವಳಿಗೆ / ಅಪಾಯ / ತಿಳಿದಿತ್ತು. / ಆತುರದಿಂದ / ಖಂಡಿತವೆಂದು

   ..........................................................................................................................

3. ಪ್ರವೇಶಿಸಿತು / ಝಾನ್ಸಿ / ಇಂಗ್ಲಿಷರ / ನಗರವನ್ನು / ಸೈನ್ಯ

   ..........................................................................................................................

4. ಸ್ವಲ್ಪ / ಕತ್ತಲಾಗುವುದಕ್ಕೆ / ಬಾಕಿಯಿತ್ತು / ಸಮಯ

   ..........................................................................................................................

5. ರಾಣಿಯು / ತಲುಪಿದಳು / ಅಲ್ಲಿಂದ / ಕಾಲಪಿಗೆ / ಹೊರಟ

   ..........................................................................................................................

**ಚಟುವಟಿಕೆ -5**

ಸಮಾನಾರ್ಥಕ ಪದಗಳನ್ನು ಆವರಣದಿಂದ ಆರಿಸಿ ಬರೆಯಿರಿ.

(ಜ್ಯೋತಿ, ಗುಡಿ, ಗೆಲುವು, ಅಗ್ನಿ, ತಾಯಿ, ದೇವಸ್ಥಾನ, ಜನನಿ, ಬೆಂಕಿ, ಬೆಳಕು, ಯಶಸ್ಸು)

ದೇವಾಲಯ - ......................... .........................

ವಿಜಯ - ......................... .........................

ಅಮ್ಮ - ......................... .........................

ಕಿಚ್ಚು - ......................... .........................

ಪ್ರಕಾಶ - ......................... .........................